ಶ್ರೀ ಬಸವರಾಜ್ ಎಸ್ ಹೊರಟ್ಟಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು)

ಅ) ಪ್ರಸ್ತುತ ಮಕ್ಕಳ ಹಕ್ಕು ಸಂರಕ್ಷಣೆಯ ಬಗೆಗಿನ ಚಟುವಟಿಕೆಯನ್ನು ಪ್ರತ್ಯೇಕವಾಗಿ ಶಿಕ್ಷಣ ಇಲಾಖೆಯು ಹಮ್ಮಿಕೊಂಡಿರುವುದಿಲ್ಲ

ಆ) ಜನಶಾಲಾ ಕಾರ್ಯಕ್ರಮವು 2004–05 ರಲ್ಲಿಯೇ ಕೊನೆಗೊಂಡಿದ್ದು, ಅಲ್ಲಿಂದ ಯಾವುದೇ ಕಾರ್ಯಕ್ರಮವನ್ನು ಹಮ್ಮಿಕೊಂಡಿಲ್ಲ

ಇ) ಅನ್ವಯಿಸುವುದಿಲ್ಲ

ಈ) ಅನ್ವಯಿಸುವುದಿಲ್ಲ

1617 (2099) ಶ್ರೀ ಪ್ರಭಾಕರ ಬಂಗೇರ ಕೆ (ಬೆಳ್ತಂಗಡಿ) – ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 2006–07 ನೇ ಸಾಲಿನಲ್ಲಿ ಮಂಜೂರಾದ ನೂತನ ಪ್ರೌಢಶಾಲೆಗಳಿಗೆ ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗಳ ನೇಮಕ ಮತ್ತು ಮೂಲಭೂತ ಸೌಕರ್ಯಗಳನ್ನು ಒದಗಿಸುವ ಕುರಿತು ಸರ್ಕಾರ ಕೈಗೊಂಡ ಕ್ರಮಗಳೇನು,

ಆ) ಬೆಳ್ತಂಗಡಿ ತಾಲ್ಲೂಕಿನ ಗ್ರಾಮಾಂತರ ಪ್ರದೇಶಗಳಲ್ಲಿ ಪ್ರಾರಂಭಿಸಲಾದ ನೂತನ ಪ್ರೌಢಶಾಲೆಗಳಿಗೆ ಸಕಾಲದಲ್ಲಿ ಮೂಲಭೂತ ಸೌಲಭ್ಯಗಳನ್ನು ಒದಗಿಸಿಕೊಡುವಲ್ಲಿ ಸರ್ಕಾರ ಸಕಾಲಿಕ ಕ್ರಮಗಳನ್ನು ಕೈಗೊಳ್ಳುವುದೇ?

ಶ್ರೀ ಬಸವರಾಜ್ ಎಸ್ ಹೊರಟ್ಟಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು)

ಅ) 2006–07 ನೇ ಸಾಲಿನಲ್ಲಿ 485 ಸರ್ಕಾರಿ ಪ್ರೌಢಶಾಲೆಗಳನ್ನು ಮಂಜೂರು ಮಾಡಲಾಗಿದ್ದು, ಪ್ರತಿ ಶಾಲೆಗೆ 01 ಮುಖ್ಯ ಶಿಕ್ಷಕರ, 01 ಕಲಾ ಮತ್ತು 01 ವಿಜ್ಞಾನ ಶಿಕ್ಷಕರ (ಪಿಸಿಎಂ) ಮತ್ತು 01 'ಡಿ' ದರ್ಜೆ ನೌಕರರ ಹುದ್ದೆಗಳನ್ನು ಮಂಜೂರು ಮಾಡಲಾಗಿದೆ ಒಂದು ದ್ವೀತಿಯ ದರ್ಜೆ ಸಹಾಯಕರ ಹುದ್ದೆ ಮಂಜೂರು ಮಾಡುವ ಪ್ರಸ್ತಾವನೆ ಪರಿಶೀಲನೆಯಲ್ಲಿದ್ದು, ಬೋಧಕ ಹುದ್ದೆಗಳನ್ನು ತಾತ್ಕಾಲಿಕವಾಗಿ ನಿಯೋಜನೆ, ಬಡ್ತಿ, ಇತ್ಯಾದಿ ಮೂಲಕ ತುಂಬಲಾಗುತ್ತಿದೆ ನೇರ ನೇಮಕಾತಿ ಪ್ರಕ್ರಿಯೆ ಜಾರಿಯಲ್ಲಿದೆ

ಆರ್ ಐ ಡಿ ಎಫ್–13 ರಡಿಯಲ್ಲಿ ಅನುದಾನ ಒದಗಿಸಲು ಕಾರ್ಯಕ್ರಮ ರೂಪಿಸಲಾಗುತ್ತಿದ್ದು, ಅನುದಾನದ ಲಭ್ಯತೆಯ ಆಧಾರದ ಮೇಲೆ ಮೂಲಭೂತ ಸೌಕರ್ಯ ಒದಗಿಸಲು ಆಸ್ಪದವಾಗುತ್ತದೆ

ಆ) ಹೌದು

1618 (1975) ಶ್ರೀ ಪ್ರಕಾಶ್ ಖಂಡ್ರೆ (ಭಾಲ್ಕಿ) – ಮಾನ್ಯ ಜಲ ಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಾಂಜ್ರಾ ನದಿಗೆ ಮಹಾರಾಷ್ಟ್ರ ರಾಜ್ಯದಲ್ಲಿರುವ ಬ್ಯಾರೇಜ್‌ಗಳನ್ನು ಎತ್ತರವಾಗಿ ಕಟ್ಟುತ್ತಿರುವುದು ಸರ್ಕಾರದ ಗಮನದಲ್ಲಿದೆಯೇ,

ಆ) ಮಹಾರಾಷ್ಟ್ರದ ಈ ಕ್ರಮದಿಂದ ಮಾಂಜ್ರಾ ನದಿಗೆ ಕಡಿಮೆ ನೀರು ಹರಿದು ಬರುವುದರಿಂದ ಈ ಭಾಗದ ರೈತರಿಗೆ ಅನ್ಯಾಯವಾಗುತ್ತಿರುವುದು ಸರ್ಕಾರದ ಗಮನದಲ್ಲಿದೆಯೇ,

ಇ) ಹಾಗಿದ್ದರೆ ಇದರ ಬಗ್ಗೆ ಸರ್ಕಾರ ಯಾವ ಕ್ರಮ ಕೈಗೊಳ್ಳಲಾಗುವುದು?

ಶ್ರೀ ಕೆ ಎಸ್ ಈಶ್ವರಪ್ಪ (ಜಲ ಸಂಪನ್ಮೂಲ ಸಚಿವರು)

ಅ) ಮಾಂಜ್ರಾ ನದಿಗೆ ಮಹಾರಾಷ್ಟ್ರ ರಾಜ್ಯದಲ್ಲಿರುವ ಬ್ಯಾರೇಜಿನ ಎತ್ತರವನ್ನು ಎತ್ತರಿಸುತ್ತಿರುವುದು ದಿನಪತ್ರಿಕೆಯ ವರದಿಯಲ್ಲಿ ಪ್ರಕಟಿಸಿರುವುದನ್ನು ಸರ್ಕಾರ ಗಮನಿಸಿದೆ

ಆ,ಇ) ಮಹಾರಾಷ್ಟ್ರದ ಬ್ಯಾರೇಜಿನ ಎತ್ತರವನ್ನು ಎತ್ತರಿಸುವುದರ ಕುರಿತು ಖಚಿತವಾಗಿ ಮಾಹಿತಿ ಪಡೆಯುವುದರ ಉದ್ದೇಶದೊಂದಿಗೆ ಸಣ್ಣ ನೀರಾವರಿ ಇಲಾಖೆಯ ಅಧಿಕಾರಿಗಳು ಮಹಾರಾಷ್ಟ್ರದ ಲಾತೂರ್ ವಿಭಾಗವನ್ನು ಸಂಪರ್ಕಿಸಲಾಗಿದ್ದು, ಅಲ್ಲಿನ ಅಧಿಕಾರಿಗಳು ಮಾಹಿತಿಯನ್ನು ಒದಗಿಸಲು ನಿರಾಕರಿಸುತ್ತಾರೆಂದು ಸಣ್ಣ ನೀರಾವರಿ ಇಲಾಖೆಯು ತಿಳಿಸಿದೆ

ಈಗ ದಿನ ಪತ್ರಿಕೆಯ ಪ್ರಕಟನೆಯನ್ನು ಆಧರಿಸಿ ಮಹಾರಾಷ್ಟ್ರ ಕಾರ್ಯದರ್ಶಿಗಳಿಗೆ ದಿನ ಪತ್ರಿಕೆಯ ಪ್ರಕಟಣೆಯಲ್ಲಿನ ವಿಷಯವನ್ನು ತಿಳಿಸಿ